(ಆ) ಈ ರೀತಿ ನಿಗದಿ ಮಾಡಿದ್ದ ಸಂಖ್ಯೆಗೆ ಅನುಗುಣವಾಗಿ ಬಡವರಿಗೆ ಹಂಚಲ್ಪಟ್ಟ ನಿವೇಶನಗಳೆಷ್ಟು ;

(ಇ) ಈ ರೀತಿ ಹಂಚಲ್ಪಟ್ಟ ನಿವೇಶನಗಳಲ್ಲಿ ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಜನಾಂಗಗಳಿಗೆ ಸೇರಿದವರಿಗೆ ಹಂಚಲ್ಪಟ್ಟ ನಿವೇಶನಗಳೆಷ್ಟು ? ಅಂಕಿಅಂಶಗಳನ್ನು ತಾಲ್ಲೂಕು ವಾರು ಒದಗಿಸಬೇಕೆಂದು ಕೋರಿಕೆ ?

ನಗರಾಡಳಿತ ಮಂತ್ರಿಗಳು (ಶ್ರೀ ಬಿ. ಬಸವಲಿಂಗಪ್ಪ):—

ಉತ್ತರ:—(ಆ) 50.000

(ಆ) 1.84.964

(ಇ) 66,221.

ತಾಲ್ಲೂಕುವಾರು ಅಂಕಿಅಂಶಗಳನ್ನು ಇದಕ್ಕೆ ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಜೂನಿಯರ್ ಕಾಲೇಜುಗಳಿಗೆ ಅಧ್ಯಾಪಕರ ನೇಮಕ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).—

೩. (೪).—ವಿದ್ಯಾಮಂತ್ರಿಗಳು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ :—

(ಅ) ರಾಜ್ಯ ಸರ್ಕಾರ ಈವರೆವಿಗೂ ಎಷ್ಟು ಜೂನಿಯರ್ ಕಾಲೇಜುಗಳನ್ನು ಆರಂಭಿಸಿದೆ. ಇವುಗಳಲ್ಲಿ ಸರ್ಕಾರಿ ಜೂನಿಯರ್ ಕಾಲೇಜುಗಳೆಷ್ಟು ? ಮತ್ತು ಖಾಸಗಿಯವರಿಂದ ನಡೆಸಲ್ಪಡುವ ಜೂನಿಯರ್ ಕಾಲೇಜುಗಳೆಷ್ಟು ;

(ಆ) ಈ ಜೂನಿಯರ್ ಕಾಲೇಜುಗಳಲ್ಲಿ 1972–73ನೆಯ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ 11ನೆಯ ಸ್ಟ್ಯಾಂಡರ್ಡ್ ವಿದ್ಯಾರ್ಥಿಗಳ (ಫಸ್ಟ್ ಇಯರ್ ಪಿ.ಯು.ಸಿ.) ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ;

(ಇ) ಈ ಜೂನಿಯರ್ ಕಾಲೇಜುಗಳಿಗೆ ಅಧ್ಯಾಪಕರ ವರ್ಗ ನೇಮಕ ಮಾಡುವಾಗ ಸರ್ಕಾರ ಕೈಕೊಂಡ ಕ್ರಮಗಳಾವುವು ;

(ಈ) ಹಾಲಿ ನೇಮಿಸಿರುವ ಅಧ್ಯಾಪಕ ವರ್ಗಗಳ ಸಂಖ್ಯೆ ಎಷ್ಟು ? ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದ ಅಧ್ಯಾಪಕರೆಷ್ಟು ?

ವಿದ್ಯಾಮಂತ್ರಿಗಳು (ಶ್ರೀ ಎ. ಆರ್. ಬದರೀನಾರಾಯಣ)—.

ಉತ್ತರ—ರಾಜ್ಯಸರ್ಕಾರ ಈವರೆವಿಗೂ 243 ಜೂನಿಯರ್ ಕಾಲೇಜುಗಳನ್ನು ತೆರೆದಿದ್ದು ಅವುಗಳ ವಿವರ ಈ ರೀತಿ ಇದೆ.

(ಅ) (1) ಸರ್ಕಾರಿ ಶಾಲೆಗಳಲ್ಲಿ ಪ್ರಾರಂಭಿಸಲ್ಪಟ್ಟ ಜೂನಿಯರ್ ಕಾಲೇಜುಗಳು 61

(2) ಖಾಸಗಿ ಶಾಲೆಗಳಲ್ಲಿ ನಡೆಸಲ್ಪಡುವ ಜೂನಿಯರ್ ಕಾಲೇಜುಗಳು 131

(3) ಮುನಿಸಿಪಲ್ ಜೂನಿಯರ್ ಕಾಲೇಜುಗಳು ಇದರಲ್ಲಿ 29 ಶಾಲೆಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಂತೆ ಪರಿಗಣಿಸಿದೆ. 34

(4) ತಾಲ್ಲೂಕ್ ಬೋರ್ಡ್ ಜೂನಿಯರ್ ಕಾಲೇಜುಗಳು 17

243

(5) ಹೊಸದಾಗಿ ತೆರೆಯಲ್ಪಟ್ಟ ಖಾಸಗಿ ಜೂನಿಯರ್ ಕಾಲೇಜುಗಳು. 39

(ಆ) ಪಿ.ಯು.ಸಿ. 1ನೆಯ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ ಬಾಲಕರು 54,506, ಬಾಲಕಿಯರು 15,710.

ಒಟ್ಟು—70,216

(ಇ) ಈಗಾಗಲೇ ಪ್ರೌಢಶಾಲೆಗಳಲ್ಲಿ ಕೆಲಸಮಾಡುತ್ತಿರುವ ಸ್ನಾತಕೋತ್ತರ ಪದವೀಧರರನ್ನು ಅವರ ಸೇವಾವಧಿಯನ್ನು ಗಣನೆಗೆ ತೆಗೆದುಕೊಂಡು ಜೂನಿಯರ್ ಕಾಲೇಜುಗಳಿಗೆ ನೇಮಕ ಮಾಡಿದೆ ಮತ್ತು ವಿಜ್ಞಾನ, ಅರ್ಥಶಾಸ್ತ್ರ, ಆಂಗ್ಲಭಾಷೆ ಮುಂತಾದ ವಿಷಯಗಳಲ್ಲಿ ಸಾಕಷ್ಟು ಅಭ್ಯರ್ಥಿಗಳು ದೊರೆಯದ ಕಾರಣ ಉದ್ಯೋಗ ವಿನಿಮಯ ಕಛೇರಿಯಿಂದ ಕೆಲ ಅಭ್ಯರ್ಥಿಗಳನ್ನು ಸಹ ಪಡೆದು ಜೂನಿಯರ್ ಕಾಲೇಜುಗಳಿಗೆ ನೇಮಕಮಾಡಿದೆ.

(ಈ) ಒಟ್ಟು ಸರ್ಕಾರಿ ಜೂನಿಯರ್ ಕಾಲೇಜುಗಳು ಮತ್ತು ಸರ್ಕಾರ ವಹಿಸಿಕೊಂಡಿರುವ ಮುನಿಸಿಪಲ್ ಮತ್ತು ತಾಲ್ಲೂಕ್ ಬೋರ್ಡಿನ ಜೂನಿಯರ್ ಕಾಲೇಜುಗಳನ್ನೊಳಗೊಂಡ ಹಾಲಿ ಸೇವೆಯಲ್ಲಿರುವವರೂ ಸೇರಿ 902 ನೇಮಕಗಳನ್ನು ಮಾಡಿದೆ. ಈ ನೇಮಕಗಳ ಪೈಕಿ 258 ಜನರು ಉದ್ಯೋಗ ವಿನಿಮಯ ಕಛೇರಿಯ ಅಭ್ಯರ್ಥಿಗಳಾಗಿರುತ್ತಾರೆ. ಈ 258 ಜನರ ಪೈಕಿ 9 ಜನ ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರುತ್ತಾರೆ.

ಉಳುಮೆಗೆ ಅರಣ್ಯ ಭೂಮಿ

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಶಿರ್ಸಿ).—

೪. (ಅ).—ವ್ಯವಸಾಯ ಹಾಗೂ ಅರಣ್ಯ ಮಂತ್ರಿಗಳು ದಯೆಯಿಟ್ಟು ಈ ವಿಷಯಗಳನ್ನು ತಿಳಿಸುವರೆ :—

(ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳನ್ನು ಮಲೆನಾಡು ಜಿಲ್ಲೆಗಳೆಂದು ಪರಿಗಣಿಸಲಾಗಿದೆ ;

(ಆ) ಈ ಮಲೆನಾಡು ಜಿಲ್ಲೆಗಳಲ್ಲಿ ಶೇಕಡ ಯಾವ ಪ್ರಮಾಣದಲ್ಲಿ ಅರಣ್ಯ ಭೂಮಿಯು ವಿಸ್ತೀರ್ಣವಿದೆ ;

(ಇ) ಅವಶ್ಯಕವಾಗಿ ಇರಬೇಕೆಂದು ರಾಷ್ಟ್ರ ನಿಗದಿ ಮಾಡಿರುವ ಸರಾಸರಿ ಅರಣ್ಯ ಭೂಮಿಯದು ಶೇಕಡ ಪ್ರಮಾಣವೆಷ್ಟು ;

(ಈ) ಅದೇ ರೀತಿ ರಾಜ್ಯ ನಿಗದಿ ಮಾಡಿರುವ ಸರಾಸರಿ ಅರಣ್ಯ ಭೂಮಿಯ ಪ್ರದೇಶದ ಪ್ರಮಾಣವೆಷ್ಟು ;

(ಉ) ಈ ಶೇಕಡಾ ಪ್ರಮಾಣವು ಮಲೆನಾಡು ಜಿಲ್ಲೆಗಳಲ್ಲಿ ಜಾಸ್ತಿ ಇರುವುದರಿಂದ ಕಳೆದ ಹತ್ತು ವರ್ಷಗಳಿಂದ ಅಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಬಡ ರೈತರಿಗೆ ಅರಣ್ಯ